# 2019

## 19 ಪರ್ವಗಳ ಹಿನ್ನೋಟ







ಮಹಾಭಾರತ 18 ಪರ್ವಗಳ ಮಹಾಕಾವ್ಯ. ಆಧುನಿಕ ಭಾರತವನ್ನೊಳಗೊಂಡ ಜಗತ್ತಿನಲ್ಲೋ ಲೆಕ್ಕಕ್ಕೆ ಸಿಗದಷ್ಟು ಪರ್ವಗಳು. ವರ್ಷದ ಕೊನೆಯಲ್ಲಿ ನಿಂತು ಹಿಂತಿರುಗಿ ನೋಡಿದರೆ, 2019ರ ಘಟನಾವಳಿಗಳು ಹಲವು ಮಹಾಭಾರತಗಳ ಸಂಪುಟಗಳನ್ನು ಕಣ್ಮುಂದೆ ತರುವಂತಿವೆ. ಆ ಘಟನಾವಳಿಗಳಲ್ಲಿ ಬೆರಗು ಮೂಡಿಸುವಂತಹವು, ನೆಮ್ಮದಿ ಹುಟ್ಟಿಸುವಂತಹವು ತೀರಾ ಕಡಿಮೆ. ಮನುಕುಲವನ್ನು ಕ್ಷೋಭೆಗೆ ದೂಡುವ, ಭೂಮಿಯ ಭವಿಷ್ಯದ ಬಗ್ಗೆ ಆತಂಕ ಉಂಟು ಮಾಡುವ ಘಟನೆಗಳೇ ಹೆಚ್ಚು. ಪರಿಸರದಲ್ಲಿನ ಪಲ್ಲಟಗಳಿಂದಾಗಿ ನೆಲ–ಮುಗಿಲು–ಸಾಗರಗಳಲ್ಲಿ ಕಾವು ಕಾಣಿಸಿಕೊಂಡಿದ್ದರೆ, ಆ ಕಿಚ್ಚಿನ ಮತ್ತೊಂದು ರೂಪವಾಗಿ ಮನುಷ್ಯ ಮನುಷ್ಯರ ನಡುವೆಯೇ ಉಂಟಾಗಿರುವ ಕಿಚ್ಚು ವಿಶ್ವನಕಾಶೆಯ ಹಲವು ಕಡೆ ಧಗಧಗಿಸುತ್ತಿದೆ. ಚಂದ್ರನತ್ತ ಜಿಗಿಯಲು ಪ್ರಯತ್ನಿಸುತ್ತಲೇ, ನೈತಿಕ ಅಧಃಪತನದ ಪಾತಾಳದತ್ತಲೂ ಜಾರುತ್ತಿದ್ದೇವೆ. ಈ ವಿರೋಧಾಭಾಸಕ್ಕೆ 2019ರ ಹಲವು ಘಟನೆಗಳು ಕನ್ನಡಿಹಿಡಿಯುವಂತಿವೆ. ವರ್ಷದ ಘಟನಾವಳಿಗಳನ್ನು 19 ಟಿಪ್ಪಣಿಗಳ ಮೂಲಕ ನಿರೂಪಿಸುವ ಈ ಪ್ರಯತ್ನ, ನಮ್ಮ ನಾಳೆಗಳನ್ನು ರೂಪಿಸಿಕೊಳ್ಳುವ ನಿಟ್ಟಿನ ಪರಾಮರ್ಶೆಯ ಪ್ರಯತ್ನವೂ ಹೌದು.